ಅಲ್ಲಿದ್ದ ಎಲ್ಲ ಹೆಂಗಸರ ಮುಖದಲ್ಲಿ ವ್ಯಕ್ತವಾಯಿತು. ತೀಜಾದ ಕಾರ್ಯಕ್ರಮ ಮುಗಿದ ನಂತರ ಹೊರಟ ಅಮ್ಮ ಹೋಗುವಾಗ ಹೊಸತೇ ರೀತಿಯ ಉಪದೇಶ ನೀಡಿ ಹೋದಳು... "ಈಗಿನ್ನೂ ನಿನಗೆ ಅಂತಹ ಮಹಾ ವಯಸ್ಸೇನೂ ಆಗಿಲ್ಲ. ಆದುದರಿಂದ ಒಂದೊಂದು ಹೆಜ್ಜೆಯನ್ನು ಜಾಗ್ರತೆಯಿಂದ ಇಡಬೇಕು. ಬೇರೆ ಗಂಡಸಿನ ಬಗ್ಗೆ ಯೋಚಿಸುವುದೂ ಅಪರಾಧವಾಗಿಬಿಡುತ್ತದೆ. ನಿನ್ನ ಅತ್ತೆ ಹಾಗೂ ನಾನು ಸೇರಿ ನಿನ್ನ ಎಲ್ಲಾ ರೇಷ್ಮೆಸೀರೆ, ಬಟ್ಟೆಗಳ ಒಂದು ಗಂಟು ಕಟ್ಟಿದ್ದೇವೆ. ಅದನ್ನು ದೊಡ್ಡ ಪೆಟ್ಟಿಗೆಯಲ್ಲಿ ಇಟ್ಟುಬಿಡು. ಒಡವೆಗಳನ್ನು ಲಾಕರ್‌ನಲ್ಲಿ ಇರಿಸಿದ್ದೇವೆ. ಡ್ರೆಸ್ಸಿಂಗ್‌ಟೇಬಲ್‌ನ್ನು ಸ್ಟೋರ್‌ರೂಂಗೆ ಹಾಕಿಸಿ ಆಗಿದೆ. ಇನ್ನು ಕನ್ನಡಿಯನ್ನು ನೋಡಲು ಏನು ಉಳಿದಿದೆ? ಹರಳೆಣ್ಣೆ ಹಾಕಿಕೊಂಡು ಜಡೆಹೆಣೆದುಕೊ. ಹಿಂದಿನ ಕಾಲದಲ್ಲಿ ವಿಧವೆಯ ಕೂದಲನ್ನು ಕತ್ತರಿಸಿ ಹಾಕಿಬಿಡುತ್ತಿದ್ದರು. ಹಾಗೆ ಮಾಡಿದ್ದರೆ ಒಳ್ಳೆಯದೇ ಆಗುತ್ತಿತ್ತು. ಈ ನಿನ್ನ ಉದ್ದನೆಯ ಕೂದಲನ್ನು ಕನ್ನಡಿಯಲ್ಲಿ ನೋಡದೆ ಬಾಚುವುದು ಎಷ್ಟು ಕಷ್ಟವಾಗಬಹುದು. ಇನ್ನು ನಿನಗೆ ಕಣ್ಣುಕಪ್ಪು, ಕಾಡಿಗೆ ಇದೆಲ್ಲಾ ಬೇಕಾಗಿಲ್ಲ. ಕ್ರೀಮ್, ಪೌಡರ್, ಲಿಪ್‌ಸ್ಟಿಕ್ ಇವುಗಳ ಪ್ರಶ್ನೆಯೇ ಇಲ್ಲ. ಮೇಕಪ್‌ಕಿಟ್ ಅನ್ನು ಕೆಲಸದವಳಿಗೆ ಕೊಟ್ಟು ಆಯಿತು. ಹಿಂದೆಲ್ಲಾ ಈರುಳ್ಳಿ, ಬೆಳ್ಳುಳ್ಳಿ, ಮಾಂಸ ಮುಂತಾದವುಗಳು ವಿಧವೆಯ ಊಟದಲ್ಲಿ ಇರುತ್ತಿರಲೇ ಇಲ್ಲ. ಒಂದರ್ಥದಲ್ಲಿ ನೀನು ಅದೃಷ್ಟವಂತೆ. ಆದರೂ ಸರಳವಾದ ಊಟ ಮಾಡು. ಎಷ್ಟೇ ಸೆಕೆಯಾದರೂ ದಿನಾ ಸ್ನಾನ ಮಾಡುವುದು ಬೇಡ. ನಿನ್ನ ಬದುಕಿನಲ್ಲಿ ಉಳಿದಿರುವುದು ಈ ಇಬ್ಬರು ಮಕ್ಕಳು ಮಾತ್ರ. ಅವರಿಗಾಗಿಯೇ ನಿನ್ನ ಬದುಕು... ಸಾವು... ಎಲ್ಲಾ..."

'ನನ್ನ ಆ ಕನಸಿನ ರಾಜಕುಮಾರನನ್ನು ಮನದೊಳಗೆ ನೆನಪು ಮಾಡಿಕೊಳ್ಳುವುದೂ ತಪ್ಪೇನು?' ಎಂದು ಕೇಳಬೇಕೆಂದು ಯೋಚಿಸಿದೆ. ಆದರೆ ಅಮ್ಮನ ಸಿಟ್ಟಿಗೆ ಹೆದರಿ ಸುಮ್ಮನಾದೆ.

ಅಮ್ಮ ಪ್ರತಿದಿನ ಫೋನು ಮಾಡಿ ಎಲ್ಲವನ್ನೂ ತಾಳ್ಮೆಯಿಂದ ಸಹಿಸಿಕೊಳ್ಳುವಂತೆ ಹೇಳುತ್ತ ತನ್ನ ಉಪದೇಶವನ್ನು ನೆನಪು ಮಾಡಿಕೊಡುತ್ತಿದ್ದಳು. 'ವಯಸ್ಸಿನಲ್ಲಿರುವ ಹೆಂಗಸು ತನ್ನ ರೀತಿ ನೀತಿ, ನಡತೆಯಲ್ಲಿ ಪರಿಶುದ್ಧತೆಯಿಂದ ಬದುಕಿದರೆ ಆಕೆ ಯಾವುದೇ ಅಡೆತಡೆ ಇಲ್ಲದೆ ನೇರವಾಗಿ ಸ್ವರ್ಗಕ್ಕೆ ತಲುಪುತ್ತಾಳೆ' ಎಂಬ ಹದೀಸಿನ ಉದಾಹರಣೆಯನ್ನು ಆಗಾಗ ಹೇಳುತ್ತಿದ್ದಳು. ಕಣ್ಣುಮುಚ್ಚಿಕೊಂಡರೆ ಎಲ್ಲಿಯಾದರೂ ಆ ನನ್ನ ಕನಸಿನ ರಾಜಕುಮಾರ ನೆನಪಿಗೆ ಬಂದು ಸ್ವರ್ಗಕ್ಕೆ ಹೋಗಲಾರದ ಅಪರಾಧಕ್ಕೆ ಒಳಗಾಗಿ ಸ್ವರ್ಗದ ಬಾಗಿಲಿನಿಂದಲೇ ಅವಮಾನಿತಳಾಗಿ ವಾಪಸು ಬಂದುಬಿಟ್ಟರೆ!... ಎಂಬ ಭಯ ಕಾಡತೊಡಗಿತು. ಹಾಗಾಗಿ ಈ ಹೆದರಿಕೆ ನನ್ನ ನಿದ್ರೆಯನ್ನು ಅಪಹರಿಸಿಬಿಟ್ಟಿತ್ತು.

ಅತ್ತೆ ತೀರಿಕೊಂಡ ಬಳಿಕ ಕುಟುಂಬದ ನಿರ್ವಹಣೆಯ ನನ್ನ ಜವಾಬ್ದಾರಿ ಪೂರ್ಣಗೊಂಡಿತು. ಮೈದುನ ಮದುವೆಯಾಗಿದ್ದ. ನಾದಿನಿ ತನ್ನ ಅತ್ತೆಯ ಮನೆಯಲ್ಲಿ ಖುಷಿಯಾಗಿದ್ದಳು. ಮಕ್ಕಳ ಶಿಕ್ಷಣಕ್ಕಾಗಿ ನಗರ ಸೇರುವುದು ಅನಿವಾರ್ಯ ಎನಿಸಿತು. ನಗರದ ವಾತಾವರಣದಿಂದ ಮನಸ್ಸು ಸ್ವಲ್ಪ ಹಗುರವಾಗಬಹುದೆನಿಸಿತು. ಹಲವಾರು ಕಡೆಗಳಲ್ಲಿ ಸುತ್ತಾಡಿ ವಿಚಾರಿಸಿದ ನಂತರ ಒಂದು ಚಿಕ್ಕ ಸ್ಕೂಲಿನಲ್ಲಿ ನೌಕರಿ ದೊರೆಯಿತು. ಅಮ್ಮನ ಸೂಚನೆಯ ಪ್ರಕಾರ ತಾನು ಮದುವೆಯಾಗಿದ್ದೇನೆ ಮುತ್ತೈದೆಯೂ ಹೌದು ಎಂದು ಸ್ಕೂಲಿನ ಸ್ಟಾಫ್‌ನವರೊಂದಿಗೆ ಸುಳ್ಳು ಹೇಳಿದೆ ಕೂಡ. ಪತಿ ನೌಕರಿ ನಿಮಿತ್ತ ದೇಶದಿಂದ ಹೊರಗಡೆ ಇದ್ದಾರೆ. ವರ್ಷ, ಎರಡು ವರ್ಷಕ್ಕೊಮ್ಮೆ ಬರುತ್ತಾರೆ ಎಂದಿದ್ದೆ. ಅಮ್ಮನ ಈ ಸೂಚನೆಯ ಪ್ರಕಾರ ಯಾವ ಗಂಡಸೂ ಕೂಡ ನನ್ನನ್ನೂ ಕೆಟ್ಟ ದೃಷ್ಟಿಯಿಂದ ನೋಡಲಾರ.

ಕಪಾಟಿನ ಮೇಲಿನ ಖಾನೆಯಲ್ಲಿ ರೇಷ್ಮೆ ಬಟ್ಟೆಗಳ ಗಂಟನ್ನು ಜೋಪಾನವಾಗಿ ಇರಿಸಿದೆ. ಒಡವೆಗಳ ಬಾಕ್ಸ್ ಅನ್ನು ಸೇಫ್ ಲಾಕರ್‌ನಲ್ಲಿ ಇಟ್ಟು ಭದ್ರಪಡಿಸಿದೆ. ಅವು ಮಕ್ಕಳಿಗೆ ಉಪಯೋಗ ಆಗುತ್ತವೆ. ಈಗ ಮಕ್ಕಳೊಂದಿಗೆ ನಗುವುದನ್ನು ಕಲಿತಿದ್ದೇನೆ. ಇಂದಿನ ಮಕ್ಕಳು ಬಹಳ ಚುರುಕು, ಬುದ್ಧಿವಂತರು.